# ರಾಜ್ಯದ ಇಬ್ಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



ದಿಲೀಪ್ ಕುಮಾರ್
ಯುವ ಪುರಸ್ಕಾರ



ಕೆ.ಶಿವಲಿಂಗಪ್ಪ
ಬಾಲ ಪುರಸ್ಕಾರ

ನವದೆಹಲಿ: ಆರ್. ದಿಲೀಪ್ ಕುಮಾರ್ ಅವರ ಪಚ್ಚೆಯ ಜಗುಲಿ ವಿಮರ್ಶಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡಮಿಯ 2025ನೇ ಸಾಲಿನ ಯುವ ಪುರಸ್ಕಾರ ಲಭಿಸಿದೆ. ಅದೇ ರೀತಿ ಬಾಲ ಪುರಸ್ಕಾರ ಪ್ರಶಸ್ತಿ ಕೆ.ಶಿವಲಿಂಗಪ್ಪ ಅವರ ನೋಟ್ ಬುಕ್ ಕೃತಿಗೆ ಬಂದಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರತಿ ವರ್ಷವೂ ಬಾಲ ಹಾಗೂ ಯುವ ಪುರಸ್ಕಾರಗಳನ್ನು ನೀಡುತ್ತದೆ.

# ಶಿವಲಿಂಗಪ್ಪ ಹಂದಿಹಾಳು ನೋಟ್‌ಬುಕ್ ಕೃತಿಗೆ 2025ರ ಬಾಲ ಸಾಹಿತ್ಯ ಪುರಸ್ಕಾರ

ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡಮಿ ಕೊಡಮಾಡುವ 2025ನೇ ಸಾಲಿನ ಬಾಲ ಸಾಹಿತ್ಯ ಪುರಸ್ಕಾರ ಕೆ. ಶಿವಲಿಂಗಪ್ಪ ಹಂದಿಹಾಳು ಅವರ ನೋಟ್‌ಬುಕ್ ಸಣ್ಣ ಕಥೆಗಳ ಸಂಕಲನಕ್ಕೆ ಲಭಿಸಿದೆ. 2021ರಲ್ಲಿ ನೋಟ್‌ಬುಕ್ ಸಣ್ಣ ಕಥೆಗಳ ಸಂಕಲನ ಪ್ರಕಟವಾಗಿತ್ತು. ಬಾಲ ಸಾಹಿತ್ಯ ಪುರಸ್ಕಾರಕ್ಕೆ ಕನ್ನಡದ ಲೇಖಕರಾದ ಡಾ.ಬಸು ಬೇವಿನಗಿಡದ, ಡಾ.ಬೇಲೂರು ರಘುನಂದನ್, ಹಾಗೂ ಶಶಿಕಲಾ ತೀರ್ಪುಗಾರರಾಗಿದ್ದರು. ಪ್ರಶಸ್ತಿಯು 50,000ರೂ ನಗದು ಹಾಗೂ ಫಲಕವನ್ನೊಳಗೊಂಡಿದೆ. ಮುಂಬರುವ ದಿನಗಳಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅಕಾಡಮಿ ಪ್ರಕಟಣೆಯಲ್ಲಿ ತಿಳಿಸಿದೆ.



# ಆರ್. ದಿಲೀಪ್ ಕುಮಾರ್‌ಗೆ 2025ರ ಕೇಂದ್ರ ಸಾಹಿತ್ಯ ಯುವ ಪುರಸ್ಕಾರ ಪ್ರಕಟ

ನವದೆಹಲಿ: ಆರ್. ದಿಲೀಪ್ ಕುಮಾರ್ ಅವರ ಪಚ್ಚೆಯ ಜಗುಲಿ ವಿಮರ್ಶಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡಮಿಯ 2025ನೇ ಸಾಲಿನ ಯುವ ಪುರಸ್ಕಾರ ಲಭಿಸಿದೆ. ಪ್ರಶಸ್ತಿ ಪುರಸ್ಕೃತರು 50 ಸಾವಿರ ರೂ. ನಗದು ಹಾಗೂ ಫಲಕವನ್ನು ಪಡೆಯಲಿದ್ದಾರೆ.



ಮುಂದಿನ ದಿನಗಳಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗುವುದೆಂದು ಅಕಾಡಮಿ ತಿಳಿಸಿದೆ. ಮೂಲತಃ ಚಾಮರಾಜನಗರ ಜಿಲ್ಲೆಯವರಾದ ಆರ್ ದಿಲೀಪ್ ಕುಮಾರ್ ಹಲವು ವರ್ಷಗಳ ಕಾಲ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ. ಹಾರುವ ಹಂಸೆ ಮೊದಲ ಕವನ ಸಂಕಲನವನ್ನು ಪ್ರಕಟಿಸಿದ ದಿಲೀಪ್ ಕುಮಾರ್ ಅವರು ಇದೀಗ ಕಾವ್ಯ, ಭಾಷಾಂತರ, ವಿಮರ್ಶೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.